ಅಲ್ಲದೆ, ೨೪೦೦ ರೂಪಾಯಿ ಒಳಪಟ್ಟು ವರಮಾನ ಇರತಕ್ಕವರಿಗೆ ಪರಿಹಾರ ಕೊಡಬೇಕೆಂದು ಆದೇಶ ಕೊಟ್ಟಿದ್ದೀರಿ, ಅದರಂತೆ ಅಧಿಕಾರಿಗಳು ಕೊಡುತ್ತಿದ್ದಾರೆ, ಆದರೆ, ೨೪೦೦ ರೂಪಾಯಿ ಮೇಲ್ಪಟ್ಟ ವರಮಾನ ಇರತಕ್ಕ ರೈತರು ನಮ್ಮ ಭಾಗದಲ್ಲಿ ಬಡವರೇ ಆಗಿದ್ದಾರೆ. ಅವರಿಗೆ ತಾವು ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕಿನ ಮೂಲಕ ಹಾಗೂ ಡಿ.ಸಿ.ಸಿ. ಬ್ಯಾಂಕಿನ ಮೂಲಕ ಸಾಲ ಕೊಡಿಸುವ ವ್ಯವಸ್ಥೆ ಮಾಡಿದ್ದೇವೆಂದು ಹೇಳಿದಿರಿ, ಈಗ ಹಾಲಿ ಅವರು ಮಾಡಿರುವ ಸಾಲಗಳಿಗೆ ೪-೪ ಸಾರಿ ಜಮೀನು ಮಾರಿದರೂ ಸಾಲ ತೀರಿಸುವುದಕ್ಕೆ ಸಾಧ್ಯವಾಗಿಲ್ಲ ಆದ್ದರಿಂದ ನನ್ನ ಸಲಹೆಯಾದರೂ, ಸಾಲಕ್ಕೆ ಬದಲಾಗಿ ರೈತರಿಗೆ ಪರಿಹಾರವನ್ನೇ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಹಿಂದೆಲ್ಲಾ ಸರ್ಕಾರದವರೇ ತಕ್ಕಾವಿ ಸಾಲ ಮತ್ತಿತರ ಸಾಲಗಳನ್ನು ನೇರವಾಗಿ ಕೊಟ್ಟಿದ್ದಾರೆ. ಈಗಲೂ ಕೂಡ ಅಂಥ ವ್ಯವಸ್ಥೆ ಮಾಡಬೇಕೆಂದು ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಈಗಾಗಲೇ ಇಡೀ ತಾಲೂಕು ಮೂರು ಸಾರಿ ಪ್ರವಾಹಕ್ಕೆ ತುತ್ತಾಗಿದೆ, ಇನ್ನು ಎಷ್ಟು ಭಾರಿ ತುತ್ತಾಗುತ್ತದೆಯೋ ಗೊತ್ತಿಲ್ಲ, ಆದ್ದರಿಂದ ಇಡೀ ತಾಲ್ಲೂಕನ್ನು ಪ್ರವಾಹದ ಹಾವಳಿಗೆ ತುತ್ತಾಗಿರತಕ್ಕ ಪ್ರದೇಶ ಎಂದು ಘೋಷಣೆ ಮಾಡಿ ಎಲ್ಲಾ ರೀತಿಯ ಅನುಕೂಲಗಳನ್ನು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಬಸವಲಿಂಗಪ್ಪ —ಸ್ವಾಮಿ, ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಜಾಸ್ತಿ ಮಳೆಯಾಗಬೇಕೆಂಬುದೇ ಸರ್ಕಾರದ ಉದ್ದೇಶ. ಆ ಪ್ರದೇಶದಲ್ಲಿ ಮಳೆ ಚೆನ್ನಾಗಿ ಆಗಿದೆ ಬಹಳ ಸಂತೋಷ, ಲಿಂಗನಮಕ್ಕಿ ತುಂಬ ಬೇಕಾದರೆ ಇನ್ನು ಹೆಚ್ಚಿ ಮಳೆಯಾಗಬೇಕು.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ತೀರ್ಥಹಳ್ಳಿಯಲ್ಲಿ ಮಳೆಯಾದರೆ, ಲಿಂಗನಮಕ್ಕಿ ತುಂಬುವುದಿಲ್ಲ.

ಶ್ರೀ ಬಿ. ಬಸವಲಿಂಗಪ್ಪ.—ಮಳೆ ಜಾಸ್ತಿಯಾಯಿತು ಅಂತ ಏನೂ ಅಳಬೇಕಾಗಿಲ್ಲ, ಅನಾನುಕೂಲವಾದವರಿಗೆ, ತೊಂದರೆಯಾವವರಿಗೆ, ನಷ್ಟವಾದವರಿಗೆ ಕೂಡಲೇ ಪರಿಹಾರ ಒದಗಿಸುವ ಬಗ್ಗೆ ಸರ್ಕಾರದವರು ಆಜ್ಞೆ ಮಾಡಿದ್ದಾರೆ. ತಹಶೀಲ್ದಾರ್‌ರವರು ೫೦೦ ರೂಪಾಯಿಗಳವರೆಗೆ ಪರಿಹಾರ ಕೊಡಲಿಕ್ಕೆ ಅಧಿಕಾರ ಕೊಟ್ಟಿದ್ದೇವೆ, ಅಸಿಸ್ಟೆಂಟ್ ಕಮೀಷನರ್‌ರವರು ೮೦೦ ರೂಪಾಯಿಗಳವರೆಗೆ ಪರಿಹಾರ ಕೊಡಲಿಕ್ಕೆ ಧಿಕಾರ ಕೊಟ್ಟಿದ್ದೇವೆ. ಜಿಲ್ಲಾಧಿಕಾರಿಗಳು ೧,೦೦೦ ರೂಪಾಯಿಗಳ ವರೆಗೆ ಪರಿಹಾರ ಕೊಡಲಿಕ್ಕೆ ಅಧಿಕಾರ ಕೊಟ್ಟಿದ್ದೇವೆ. ಮನೆ ಬಿದ್ದವರು ಮನೆ ಕಟ್ಟಿಸಿಕೊಳ್ಳಲಿ, ಇನ್ನು ಹೆಚ್ಚು ಪರಿಹಾರದ ಅಗತ್ಯ ಇದ್ದರೆ ಒದಗಿಸುತ್ತೇವೆ.

Matters under rule 31

(i) *re: non-payment of Poonam Theatre, Jayanagar*

†ಶ್ರೀ ಎಂ. ಚಂದ್ರಶೇಖರ್ (ಜಯನಗರ).—ಸ್ವಾಮಿ, ಇದರ ಬಗ್ಗೆ ಕೆಲವು ಮಾತುಗಳನ್ನು ಮುಂಚಿತವಾಗಿಯೇ ಹೇಳಬೇಕಾಗುತ್ತದೆ. ಜಯನಗರ ಷಾಪಿಂಗ್ ಕಾಂಪ್ಲೆಕ್ಸ್‌ನಲ್ಲಿ ಕಾರ್ಪೋರೇಷನ್ನಿನವರು ಒಂದು ಚಲನಚಿತ್ರಮಂದಿರವನ್ನು ಕಟ್ಟಿಸಿ ಕೆಲವಾರು ವರ್ಷಗಳಿಂದ ಬಾಡಿಗೆಗೆ ಕೊಟ್ಟಿದ್ದಾರೆ. ಆದರೆ, ಬಾಡಿಗೆಗೆ ತೆಗೆದುಕೊಂಡಂತಹ ವ್ಯಕ್ತಿ ಮಾರ್ಚಿ ತಿಂಗಳಿಂದ ಈಚೆಗೆ ಬಾಡಿಗೆ ಕೊಡದೆ ಸರ್ಕಾರಕ್ಕೆ ಲಕ್ಷಾಂತರ ರೂಪಾಯಿಗಳು ನಷ್ಟವಾಗಿದೆ. ಕಳೆದ ೫-೬ ತಿಂಗಳಿಂದ ಚಿತ್ರಮಂದಿರವನ್ನು ಮುಚ್ಚಿದ್ದಾರೆ. ಅವರ ಮೇಲೆ ಏನು ಕ್ರಮ ಮಾಡುತ್ತಿದ್ದಾರೋ ಗೊತ್ತಿಲ್ಲ, ಅವರಿಂದ ಬಾಡಿಗೆ ವಸೂಲು ಮಾಡುತ್ತಿದ್ದಾರೋ ಗೊತ್ತಿಲ್ಲ. ಇವತ್ತು ಚಿತ್ರಮಂದಿರ ಮುಚ್ಚಿರುವುದರಿಂದ ತಿಂಗಳು ತಿಂಗಳು ಸರ್ಕಾರಕ್ಕೆ ಬರಬೇಕಾಗಿದ್ದ ಬಾಡಿಗೆಯಿಂದ ನಷ್ಟವಾಗುತ್ತಿದೆ. ಅವರ ಬದಲು ಬೇರೆಯವರಿಗಾದರೂ ಕೊಟ್ಟು ಸರ್ಕಾರಕ್ಕೆ ಬಾಡಿಗೆ ಬರುವ ವ್ಯವಸ್ಥೆ ಮಾಡಬಹುದಿತ್ತು. ಅಲ್ಲಿರತಕ್ಕ ಬಾಡಿಗೆದಾರ ಯಾರು ಅಂದರೆ, ರಾಜಕೀಯ ಪ್ರಭಾವ ವಿರುವಂತಹ ಮುಖ್ಯಮಂತ್ರಿಗಳ ಪ್ರಭಾವ ಇರುವಂತಹ ಯೂತ್ ಕಾಂಗ್ರೆಸ್ (ಐ) ವ್ಯಕ್ತಿ, ಈ ವ್ಯಕ್ತಿಗೆ ಕಾರ್ಪೊರೇಷನ್ ಅಧಿಕಾರಿಗಳು ಏನೂ ಮಾಡುವುದಕ್ಕಾಗುವುದಿಲ್ಲ, ನನ್ನನ್ನು ಯಾರು ಏನು ಮಾಡುವುದಕ್ಕಾಗುವುದಿಲ್ಲವೆಂದು ಆತ ಹೇಳಿಕೊಳ್ಳುತ್ತಿದ್ದಾನೆ.

ಮತ್ತೊಂದು ವಿಚಾರ ಅಂದರೆ, ಇವರಿಗೆ ಬೇಕಾದಂತಹ ಜನ, ಜಯನಗರದಲ್ಲಿ ಕಾರ್ಪೊರೇಷನ್ ನವರು ಮತ್ತು ಬಿ.ಡಿ ಎ.ನವರು ಬಿಟ್ಟಿದ್ದ ಸ್ಥಳದಲ್ಲಿ (ಲಂಗ್‌ಪ್ಲೇಸ್) ಒಂದು ನಿವೇಶನ ತೆಗೆದುಕೊಂಡು ಖಾಸಗಿ ಶಾಲೆಯನ್ನು ನಡೆಸುತ್ತಿದ್ದಾರೆ. ಇದರ ಬಗ್ಗೆ ನಾನು ಗಮನಸೆಳೆಯುವ ಸೂಚನೆ ಕೊಟ್ಟಿದ್ದೇನೆ.

ಈ ವ್ಯಕ್ತಿಯಿಂದ ಸರ್ಕಾರಕ್ಕೆ ಎಷ್ಟು ಲಕ್ಷ ರೂಪಾಯಿ ಬರಬೇಕಾಗಿದೆ, ಇದರ ಬಗ್ಗೆ ಸರ್ಕಾರದವರು ಏನು ಕ್ರಮ ತೆಗೆದುಕೊಂಡಿದ್ದಾರೆ? ಆ ವ್ಯಕ್ತಿಯನ್ನು ಹೊರಹಾಕಿ ಬೇರೆಯವರಿಗೆ ಚಿತ್ರಮಂದಿರವನ್ನು ಬಾಡಿಗೆಗೆ ಕೊಟ್ಟು ಸಾರ್ವಜನಿಕರಿಗೆ ಉಪಯೋಗವಾಗುವ ರೀತಿಯಲ್ಲಿ ಏನು ವ್ಯವಸ್ಥೆ ಮಾಡುತ್ತೀರಾ ? ಇದರ ಬಗ್ಗೆ ಮಾನ್ಯ ಮಂತ್ರಿಗಳು ದಯವಿಟ್ಟು ತಿಳಿಸಬೇಕೆಂದು ಕೇಳಿಕೊಳ್ಳುತ್ತೇನೆ,

SRI H. C. SRIKANTAIAH (Minister for Municipal Administration)—

The lease of the Air conditioned theatre in Jayanagar Shopping Complex in favour of Smt. S. D. Banu was duly terminated by the Corporation at the end of the tenancy month namely 9th July, 1977 by a notice dated 17th June 1977. Thereafter, eviction proceedings were initiated against her under the provisions of the Karnataka Public Premises (Eviction of Unauthorised Occupants) Act, 1974, and in the said proceedings. the Competent officer made an order of eviction dated 22nd August 1977 under sub-section(1) of Section 5 of the said Act. In pursuance of the said order. the Competent Officer evicted the said Smt. S. D. Banu from the said theatre and took possession thereof.

While the Competent Officer has taken action under sub-section 1 of Section 6 of the said Act in regard to the properties left by Smt. S. D. Banu in the theatre, the Syndicate Bank has since filed two suits O. S. Nos. 416/1978 and 417/1978 against the Poonam Enterprises. defandant No. 1 their partners defendant Nos. 2 to 8 and obtained in the Corporation. Defendant No. 9 and obtained in the first mention suit a conditional attachment in regard to the projector and in the next mentioned suit a conditional attachment of the articles mentioned in the list attached thereto.

As the premises and the properties are the subject matter of litigation, the decision of the Court will have to be awaited. The corporation authorities are being instructed to expedite the leesing out of the properties in the best interest of the Corporation.

೧೦-೩೦ ಎ. ಎಂ.

ಶ್ರೀ ಪಿ. ರಾಮದೇವ್.— ಅದರಿಂದ ಎಷ್ಟು ಬಾಕಿ ಬರಬೇಕಾಗಿರುತ್ತದೆ ಎನ್ನುವುದನ್ನು ಹೇಳುತ್ತೀರಾ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.— ಅದರಿಂದ ೨ ಲಕ್ಷ ರೂಪಾಯಿಗಳು ಬಾಕಿ ಬರಬೇಕಾಗಿರುತ್ತದೆ.

SRI P. RAMADEV.— Is it a fact that the Hon. Chief Minister had called for the file ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.— ಮಾನ್ಯ ಅಧ್ಯಕ್ಷರೆ ಮಾನ್ಯ ಎಂ. ಚಂದ್ರಶೇಖರ್‌ರವರು ಮತ್ತು ಶ್ರೀ ಪಿ. ರಾಮದೇವ್‌ರವರು ಬಹಳವಾಗಿ ಶಂಕೆಯನ್ನು ಏನು ವ್ಯಕ್ತಪಡಿಸಿದ್ದಾರೆ ಅದಕ್ಕೆ ಆಧಾರವಿಲ್ಲ. ಮಾನ್ಯ ಮುಖ್ಯಮಂತ್ರಿಯವರು ಫೈಲನ್ನು ಕಾಲ್‌ಫರ್ ಮಾಡಿಯೂ ಇಲ್ಲ, ಪಾಪ ಯಾರಿಗೂ ಅವರ ಪರವಾಗಿ ಆರ್ಡರ್ಸ್ ಕೂಡ ಕೊಟ್ಟಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.— ಪಾಪ ಯಾರು ? ಚೀಫ್ ಮಿನಿಸ್ಟರ್‌ರವರ ಪಾಪನೋ ? ಅಥವಾ ನಿಮ್ಮ ಪಾಪನೋ ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.— ಯಾರ ಪಾಪನೂ ಅಲ್ಲ. ಕಾರ್ಪೊರೇಷನ್ ಆಕ್ಟ್ ಪ್ರಕಾರ ಅವರನ್ನು ಎವಿಕ್ಟ್ ಮಾಡಿಸಿ, ಪೋಜಿಷನ್ ತೆಗೆದುಕೊಂಡಮೇಲೆ ಪುನಃ ವಾಪಸ್ ಕೊಡತಕ್ಕಂಥಾದ್ದು ಕಾನೂನಿನಲ್ಲಿ ಇಲ್ಲ. ಯಾರಿಗೆ ಬಾಡಿಗೆಗೆ ಆಸ್ತಿಯನ್ನು ಕೊಟ್ಟು ಈವತ್ತಿನ ದಿವಸ ಡಿಫಾಲ್ಟರ್ ಆಗಿರುತ್ತಾರೋ ಅವರನ್ನು ಎವಿಕ್ಟ್ ಮಾಡಿಸಿ ಕಾರ್ಪೊರೇಷನ್ ತಮ್ಮ ವಶಕ್ಕೆ ತೆಗೆದುಕೊಂಡಮೆಲೆ ಪುನಃ ಬಾಡಿಗೆದಾರರಿಗೆ ಆಸ್ತಿಯನ್ನು ಕೊಡತಕ್ಕಂಥದ್ದು ಕಾನೂನಿನಲ್ಲಿ ಅಡಕವಾಗಿಲ್ಲ ಕೊಡುವ ಪ್ರಶ್ನೆಯೂ ಕೂಡ ಬರುವುದಿಲ್ಲ. ಈಗ ಏನಾಗಿದೆ ಎಂದರೆ ದುಡ್ಡನ್ನು ವಸೂಲು ಮಾಡತಕ್ಕಂಥ ಸಂದರ್ಭದಲ್ಲಿ ನಮಗಿಂತಲೂ ಹೆಚ್ಚಿನ ಸಾಲ ಕೊಟ್ಟಿರತಕ್ಕಂಥ ಸಿಂಡಿಕೇಟ್ ಬ್ಯಾಂಕ್‌ನವರದೂ, ಅದಕ್ಕೆ ಫೈನಾನ್ಸ್ ಮಾಡಿರತಕ್ಕಂಥವರದು ಡಿಮ್ಯಾಂಡ್ ಇದ್ದು ಅವರು ಕೋರ್ಟಿನಿಂದ ಅಟ್ಯಾಚ್‌ಮೆಂಟ್ ತಂದಿರತಕ್ಕಾರೆ. ಅದರ ಮೇಲೆ ಕೋರ್ಟಿನಲ್ಲಿ ಲಿಟಿಗೇಷನ್ ಇರುತ್ತದೆ. ಕಾನೂನು ಪ್ರಕಾರವಾಗಿ ಟೆಂಡರ್‌ನ್ನು ಕರೆದು ಅದನ್ನು ಲೀಸ್‌ಹೋಲ್ಡ್ ಮಾಡಬೇಕಾಗಿರುತ್ತದೆ ಅದನ್ನು ಮಾಡುತ್ತೇವೆ. ಪುನಃ ಅವರಿಗೇನೇ ಕೊಡ ತಕ್ಕಂಥಾದ್ದು ಸಾಧ್ಯವಿಲ್ಲ. ಆದರಬಗ್ಗೆ ಶಂಕೆಯನ್ನು ಪಡಬೇಕಾದ ಪ್ರಮೇಯವೇ ಇರುವುದಿಲ್ಲವೆಂದು ಈ ಸಂದರ್ಭದಲ್ಲಿ ತಮಗೆ ಹೇಳಬಯಸುತ್ತೇನೆ.

SRI P. RAMADEV.— According to the agreement the monthly rent was Rs. 41,000 but later on, it was reduced to Rs. 20,000.

ಶ್ರೀ ಎಚ್. ಸಿ. ಶ್ರೀಕಂಠಯ್ಯ.— ಜಯನಗರ ಷಾಪಿಂಗ್ ಕಾಂಪ್ಲೆಕ್ಸ್‌ನಲ್ಲಿ ಹಿಂದೆ ಯಾರು ಯಾರು ಬಾಡಿಗೆದಾರರು ಇದ್ದರೋ, ಅವರೆಲ್ಲರಿಗೂ ಬಾಡಿಗೆಗೆ ಕೊಟ್ಟು ಒಂದು ಅಗ್ರಿಮೆಂಟ್ ಆಗಿತ್ತು. ಅವರೆಲ್ಲರೂ ಒಂದು ಮನವಿಯನ್ನು ಸಲ್ಲಿಸಿ ಬಾಡಿಗೆಯನ್ನು ಕಡಿಮೆ ಮಾಡಬೇಕೆಂದು ಕೇಳಿಕೊಂಡಿದ್ದರ ಮೇರೆಗೆ ೩೦ ಪರ್ಸೆಂಟನಷ್ಟು ಬಾಡಿಗೆಯನ್ನು ಕಡಿಮೆ ಮಾಡಲಾಯಿತು. ಅದರಂತೆ ಆ ಥಿಯೇಟರ್ ಬಾಡಿಗೆಗೆ ತೆಗೆದು ಕೊಂಡಿರುವವರು ಕೂಡ, ನಾನು ಈ ಷಾಪಿಂಗ್ ಕಾಂಪ್ಲೆಕ್ಸ್‌ನಲ್ಲಿ ಬಾಡಿಗೆದಾರ ನಾಗಿರುತ್ತೇನೆ. ನನಗೂ ಕೂಡ ಅವರಂತೆ ಬಾಡಿಗೆಯನ್ನು ಕಡಿಮೆ ಮಾಡಿಕೊಡಬೇಕೆಂದು ಅರ್ಜಿಯನ್ನು ಸರ್ಕಾರಕ್ಕೆ ಕೊಟ್ಟಿದ್ದಾರೆ. ಆದರ ಬಗ್ಗೆ ಇನ್ನೂ ತೀರ್ಮಾನವಾಗಿಲ್ಲ. ಹಿಂದೆ ಇದನ್ನು ಬಾಡಿಗೆಗೆ ಕೊಡ ಬೇಕಾದರೆ ಟೆಂಡರನ್ನು ಕರೆದು ಹೈಯೆಸ್ಟ್ ಬಿಡ್ಡರ್ ಆದ ಇವರಿಗೆ ೪೨ ಲಕ್ಷ ರೂಪಾಯಿಗಳಿಗೆ ಕೊಟ್ಟಿರುತ್ತದೆ. ಮತ್ತೆ ಈವಾಗ ಜಾಸ್ತಿ ಎಂದರೆ ಅದರಲ್ಲಿ ಕಡಿಮೆ ಮಾಡುವ ಪ್ರಶ್ನೆಯೇ ಬರುವುದಿಲ್ಲ. ಥಿಯೇಟರ್‌ನ್ನೆ ಎವಿಕ್ಟ್ ಮಾಡಿಸತಕ್ಕಂಥ ಸಂದರ್ಭವಿರುವಾಗ ಬಾಡಿಗೆಯನ್ನು ಕಡಿಮೆ ಮಾಡುವ ಪ್ರಶ್ನೆ ಬರುವುದಿಲ್ಲ ಕೇವಲ ೨-೩ ತಿಂಗಳಿಂದ ಮಾತ್ರ ಅವರ ಕಡೆಯಿಂದ ಬಾಡಿಗೆ ಬರಬೇಕಾದ್ದು ಇರುತ್ತದೆ. ಥಿಯೇಟರ್ ಏರ್‌ಕಂಡೀಷನ್ ಆಗಿದ್ದು, ಎಲೆಕ್ಟ್ರಿಸಿಟಿ ಇವೆಲ್ಲ ಸಿಕ್ಕಾಪಟ್ಟೆ ಬೆಲೆ ಜಾಸ್ತಿಯಾಗಿರುವುದರಿಂದ ಮತ್ತು ಇದನ್ನೆಲ್ಲಾ ಕಾರ್ಪೊರೇಷನ್‌ಗೆ ಕಟ್ಟಬೇಕಾಗಿರುವುದರಿಂದ ಕನ್‌ಸೆಷನ್ ಕೇಳಿರುತ್ತಾರೆ. ಕೇವಲ ಎರಡೂ ಮೂರು ತಿಂಗಳ ಬಾಡಿಗೆಯನ್ನು ಕಟ್ಟದೆ ಡಿಫಾಲ್ಟರ್ ಆಗಿರುವುದರಿಂದ ಅದನ್ನು ಮಾತ್ರ ಪರಿಶೀಲನೆ ಮಾಡಬೇಕಾಗಿರುತ್ತದೆ. ಯಾರು ಯಾರ ಹತ್ತಿರ ಸಾಲವನ್ನು ಮಾಡಿರುತ್ತಾರೋ ಅವರೆಲ್ಲರೂ ಕೂಡ ಕೋರ್ಟಿಗೆ ಹೋಗಿರುತ್ತಾರೆ. ಅದು ತೀರ್ಮಾನವಾದ ಮೇಲೆ, ಟೆಂಡರ್‌ನ್ನು ಕರೆದು ಮತ್ತೆ ಥಿಯೇಟರನ್ನು ಬಾಡಿಗೆಗೆ ಕೊಡುವುದರ ಬಗ್ಗೆ ಕ್ರಮವನ್ನು ಅನುಸರಿಸಿ ಮಾಡುವಂತೆ ಖಂಡಿತ ವಾಗಿಯೂ ಆದೇಶವನ್ನು ಕೊಡುತ್ತೇನೆ.- ಮಾನ್ಯ ಚಂದ್ರಶೇಖರ್‌ರವರು ಹೇಳಿದಂತೆ ಆತನು ಯೂತ್ ಕಾಂಗ್ರೆಸ್‌ಗೆ ಸೇರಿರಲಿ. ಯಾವ ಕಾಂಗ್ರೆಸ್‌ನವರೇ ಆಗಿರಲಿ ಆ ಪ್ರಶ್ನೆ ಇಲ್ಲಿ ಬರುವುದಿಲ್ಲ. ಆದ್ದರಿಂದ ಆ ಶಂಕೆಯನ್ನು ಬಿಟ್ಟುಬಿಡಬೇಕೆಂದು ಅವರಲ್ಲಿ ಕೇಳಿಕೊಳ್ಳುತ್ತೇನೆ.

SRI P. RAMADEV.— Corporation property is a public property. How can the Syndicate Bank seize the property. The projector is a Corporation property.

ಶ್ರೀ ಎಚ್. ಸಿ. ಶ್ರೀಕಂಠಯ್ಯ.— ಪ್ರೊಜೆಕ್ಟರ್‌ನ್ನೇ ಆಗಲಿ ಯಾವುದೇ ಸೌಕರ್ಯವನ್ನು ಅವರಿಗೆ ಒದಗಿಸಿರಲಿಲ್ಲ. ಅದೆಲ್ಲವನ್ನು ಸಾಲಮಾಡಿ ತಂದಿರತಕ್ಕಂಥಾದ್ದಾಗಿರುತ್ತದೆ. ಮೊದಲಿನಿಂದಲೂ ಕಾರ್ಪೊರೇಷನ್‌ರವರೂ ಯಾವವಿಧವಾದ ಸೌಲಭ್ಯವನ್ನೂ ಇವರಿಗೆ ಒದಗಿಸದೆ ಇರುವುದರಿಂದ ಕಾರ್ಪೊ ರೇಷನ್‌ಗೆ ಇದರಿಂದ ಯಾವ ಲುಕ್ಸಾನೂ ಆಗುತ್ತಾ ಇಲ್ಲ.

ಶ್ರೀ ಎಂ. ಚಂದ್ರಶೇಖರ್.— ತಿಂಗಳಿಗೆ ೪೦ ಸಾವಿರ ರೂಪಾಯಿಗಳು ಕಾರ್ಪೊರೇಷನ್‌ಗೆ ನಷ್ಟ ವಾಗುತ್ತಿದೆ. ಇದಕ್ಕೆ ಏನು ಕ್ರಮ ತೆಗೆದುಕೊಳ್ಳುತ್ತೀರೆಂದು ಕೇಳುತ್ತೇನೆ ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.-- ಅಧ್ಯಕ್ಷರೆ ಈಗಾಗಲೇ ಹೇಳಿದ್ದೇನೆ. ಇದರ ಬಗ್ಗೆ ಕೋರ್ಟಿನಲ್ಲಿ ಲಿಟಿಗೇಷನ್ ಇರುವುದರಿಂದ, ಕಾರ್ಪೊರೇಷನ್‌ನವರು ಆರ್ಡರ್ಸ್‌ಗಾಗಿ ಅಪೈಟ್ ಮಾಡುತ್ತಿದ್ದಾರೆ. ಅದರ ಪೊಜಿಷನ್ ತೆಗೆದುಕೊಳ್ಳಬೇಕೆಂದರೆ ಬಹಳ ಕಷ್ಟವಿರುತ್ತದೆ. ಕೋರ್ಟ್ ಆರ್ಡರ್ ಬಂದ ಮೇಲೆ ಕಾನೂನು ಪ್ರಕಾರ ಖಾಲಿ ಮಾಡಿಸುವುದಕ್ಕೆ ಪ್ರಯತ್ನ ಪಡುತ್ತೇನೆಂದು ಈ ಸಂದರ್ಭದಲ್ಲಿ ಹೇಳ ಬಯಸುತ್ತೇನೆ.

(*ii*) *Regarding attrocities on a harijan in Chadchan of Indi Taluk.*

† SRI S. S. ARAKERI (Ballolli).— Sir, I raise a matter under Rule 312 regarding attrocities on a harijan in Chadchan of Indi Taluk. ದಿನಾಂಕ ೧೩ನೇ ಜುಲೈ ೧೯೭೮ ರಂದು ಚಡಚಣ ಟೌನ್‌ನಲ್ಲಿ ಶ್ರೀ ಈರಪ್ಪ ಪೀರಪ್ಪ ಬಾನಸೊಡಿ ಎಂಬ ಹರಿಜನ ವ್ಯಕ್ತಿಯ ಮೇಲೆ ಹಾಡ ಹಗಲಿನಲ್ಲಿಯೇ ಹಲ್ಲೆ ನಡೆದಿರುತ್ತದೆ. ಶ್ರೀ ಬಾನಸೋಡಿಯವರು ನನ್ನ ಕ್ಷೇತ್ರವಾದ ಬೆಳ್ಳುಳಿಯಲ್ಲಿ ಬಹಳ ಜನಪ್ರಿಯವಾದ ವ್ಯಕ್ತಿಯಾಗಿರುತ್ತಾರೆ. ಇವರು ಪಂಚಾಯತಿ ಬೋರ್ಡ್ ಮೆಂಬರ್ ಕೂಡ ಆಗಿರುತ್ತಾರೆ. ಇಂಥ ವ್ಯಕ್ತಿಯ ಮೇಲೆ ದಿನಾಂಕ ೧೩ನೇ ಜುಲೈ ೧೯೭೮ ರಂದು ಹಾಡ ಹಗಲಿನಲ್ಲಿಯೇ ಚಂದ್ರಹಾಸ ಸನ್ ಆಫ್ ದಶರತ ಗೋಟ್ಯಾಲ್, ಶೈಲತುಕರಾಮ ವಾಲೀಕರ, ಮಲ್ಲಪ್ಪ ಶಿವಪ್ಪ ಕೋಲಿ ಎಂಬುವರು ಹಲ್ಲೆಯನ್ನು ಮಾಡಿರುತ್ತಾರೆ. ಇಂಥ ಒಬ್ಬ ಹರಿಜನ ಲೀಗಲ್ ವ್ಯಕ್ತಿ ಏನಾ ಇದ್ದಾರೆ ಅವರ ಮೇಲೆ ಹಲ್ಲೆ ನಡೆಯುತ್ತಿರಬೇಕಾದರೆ, ಸಕ್ಕದಲ್ಲಿದ್ದವರು ರಕ್ಷಣೆಗೆ ಬರದಿದ್ದರೆ, ಭಯಂಕರವಾದ ಘಟನೆಯಾಗವುದಕ್ಕೆ ಅವಕಾಶವಾಗುತ್ತಿತ್ತು. ಆದರ ಬಗ್ಗೆ ಪೋಲೀಸ್ ಆಫೀಸರ್ ಆದ ಸಬ್ ಇನ್‌ಸ್ಪೆಕ್ಟರ್‌ರವರು ಇಲ್ಲಿಯವರೆಗೂ ಯಾವ ರೀತಿಯಾದ ಕ್ರಮವನ್ನು ತೆಗೆದುಕೊಂಡಿಲ್ಲ. ಮತ್ತು ಆವರಿಗೆ ಯಾವರೀತಿಯಾದ ರಕ್ಷಣೆಯನ್ನೂ ಕೂಡ ಕೊಟ್ಟಿಲ್ಲ. ಅವರ ಹೆಂಡತಿ, ಮಕ್ಕಳು, ಮತ್ತು ಆಸ್ತಿಗೆ ಗಡಾಂತರ ಪರಿಸ್ಥಿತಿ ಇರುತ್ತದೆ. ಇವರಿಗೆ ರಕ್ಷಣೆಯನ್ನು ಕೊಡಬೇಕೆಂದು ಸರ್ಕಾರದವರ ಗಮನಕ್ಕೂ ಕೂಡ ನಾನು ಈಗಾಗಲೇ ತಂದಿರುತ್ತೇವೆ. ಇಲ್ಲಿಯತನಕ ಆಪರಾಧಿಗಳ ಮೇಲೆ ಯಾವ ರೀತಿಯಾದ ಕ್ರಮವನ್ನು ಕೈಗೊಂಡಿಲ್ಲ. ಇದಕ್ಕೆ ಕಾರಣವೇನೆಂದು ಕೇಳುತ್ತೇನೆ. ೧೫ ಸಾವಿರ ಜನರು ಇರತಕ್ಕಂಥ ಈ ಕ್ಷೇತ್ರದ ಜನರು ಇದರ ಬಗ್ಗೆ ತೀವ್ರವಾದ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಸೈನ್‌ಮಾಡಿ ಪತ್ರಗಳನ್ನು ಕೂಡ ತಮಗೆ ಬರೆದಿದ್ದಾರೆ. ಆದರೂ ಕೂಡ ಪೋಲೀಸ್‌ನವರು ಉದಾಸೀನ ಮಾಡಿದ್ದಾರೆ. ಸಂಯುಕ್ತ ಸಂಬಂಧಪಟ್ಟ ಸಚಿವರು ಶ್ರೀ ಈರಪ್ಪ ಪೀರಪ್ಪ ಬಾನಸೋಡಿ ಅವರಿಗೆ ರಕ್ಷಣೆಯನ್ನು ಕೊಟ್ಟು ಅವರ ಆಸ್ತಿಗೂ ರಕ್ಷಣೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

† SRI B. SUBBAYYA SHETTY (Minister for Education).— On behalf of Chief Minister I wish to State as follows.—Sir, according to the report received from the Superintendent of Police, Bijapur that on 14th July 1978 Irappa Peerappa Bansude of Chadchan presented a complaint in Chadchan Police Station against the accused Chandra sha s/o Dasahrath Gotyal (2) Shail Tukaram Walikar and (3) Mallappa Shivappa Koli, all of Chadchan, about his confinement and assault by the accused persons. On the strength of this complaint, the S. H. O. of Chadchan P. S. registered a case in Cr. No. 90/78 under Sec. 341, 323, 504 and 506 I.P.C. against all the above 3 persons. The investigation discloses that there is a dispute between complainant, Irappa Peerappa Banasude and Mallappa Shivappa Koli (accused) of Chadchan on a land known as peeranna Hola. In this connection, a case is pending before the Land Tribunal, Indi. All the three accused persons have already been arrested on 22nd July 1978 and released on bail. The investigation of this case is almost completed and charge-sheet will be placed shortly. There is no breach of peace in the